**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಃ ನ್ಯಾಯಾಲಯಃ ನರಸಿಂಹರಾಜಪುರ**

**ಸಿಸಿಃನಂಃ 519/2024**

**ಸಿ.ಡಬ್ಲ್ಯೂಃ4**
**ಪಿ.ಡಬ್ಲೂಃ 3**

**ಸಾಕ್ಷಿದಾರರ ಹೆಸರು ಃ ಭರತ್ ಕುಮಾರ್**
**ತಂದೆಯ ಹೆಸರು ಃ ಚಿಕ್ಕೇಗೌಡ**
**ವಯಸ್ಸು ಃ 35 ವರ್ಷ**
**ಉದ್ಯೋಗ ಃ ಅಬಕಾರಿ ಪೇದೆ**
**ವಾಸಸ್ಥಳ ಃ ಚಿಕ್ಕಮಗಳೂರು**

**ದಿನಾಂಕಃ 9.6.2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಃಃ ಮುಖ್ಯ ವಿಚಾರಣೆಃ ಮಾನ್ಯಃ ಎಪಿಪಿಯವರಿಂದಃ**

ನಾನು ದಿನಾಂಕಃ 24.2.2024 ರಿಂದ ದಿನಾಂಕಃ 24.6.2024 ರವರೆಗೆ ನ ರಾ ಪುರ ಅಬಕಾರಿ ಇಲಾಖೆಯಲ್ಲಿ ಅಬಕಾರಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 5.4.2024 ರಂದು ಮಧ್ಯಾಹ್ನ 12.30 ಗಂಟೆ ಸಮಯದಲ್ಲಿ ನ ರಾ ಪುರ ತಾಲ್ಲೂಕು ಬಿ ಹೆಚ್ ಕೈಮರ ಸರ್ಕಲ್ ನ ಬಲಭಾಗದಲ್ಲಿ ಚಾಸಾ-1 ರವರ ಜೊತೆ ನಾನು ಮತ್ತು ಇತರೆ ಅಬಕಾರಿ ಪೊಲೀಸರು 2024 ರ ಲೋಕ ಸಭಾ ಸಾರ್ವತ್ರಿಕ ಚುನಾವಣೆ ಹಿನ್ನಲೆಯಲ್ಲಿ ಇಲಾಖಾ ವಾಹನ ಸಂಃ ಕೆಎ-18-ಜಿ-89209 ವಾಹನದಲ್ಲಿ ನ ರಾ ಪುರ ಪಟ್ಟಣದಲ್ಲಿ ಗಸ್ತು ಕರ್ತವ್ಯದಲ್ಲಿದ್ದಾಗ ನ ರಾ ಪುರ ಪಟ್ಟಣದ ದೀಪ್ತಿ ಸರ್ಕಲ್ ಬಳಿ ಮಧ್ಯಾಹ್ನ 12.15 ಗಂಟೆ ಸಮಯದಲ್ಲಿ ಒಬ್ಬ ವ್ಯಕ್ತಿ ಬಿ ಹೆಚ್ ಕೈಮರ ಸರ್ಕಲ್ ಹತ್ತಿರ ಒಂದು ಕೈಚೀಲದಲ್ಲಿ ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿರುವುದಾಗಿ ಖಚಿತ ಮಾಹಿತಿ ಬಂದ ಮೇರೆಗೆ ಚಾಸಾ-1 ರವರು ನನ್ನನ್ನು ಮತ್ತು ಚಾಸಾ-2 ಮತ್ತು 3 ರವರನ್ನು ಪಂಚ ಸಾಕ್ಷಿದಾರರಾಗಿ ಸಹಕರಿಸಲು ಕೋರಿ ನೋಟೀಸು ಜಾರಿ ಮಾಡಿರುತ್ತಾರೆ. ತದನಂತರ ಚಾಸಾ-1 ರವರು ಸ್ಥಳದಲ್ಲಿಯೇ ಶೋಧನಾ ಸಮುಚ್ಚಿತ್ತ ವಾರೆಂಟನ್ನು ತಯಾರು ಮಾಡಿಕೊಂಡು ಚಾಸಾ-2 ಮತ್ತು 3 ರವರ ಸಮಕ್ಷಮ ಸದರಿ ಆರೋಪಿತ ವ್ಯಕ್ತಿಯ ಮೇಲೆ ದಾಳಿ ನಡೆಸಿ ಸದರಿ ವ್ಯಕ್ತಿಯ ಶೋಧನೆ ಮಾಡಲಾಗಿ ಆತನ ಬಳಿ ಇದ್ದ ಒಂದು ಕೈ ಚೀಲವನ್ನು ಪರಿಶೀಲಿಸಲಾಗಿ ಸದರಿ ಕೈ ಚೀಲದಲ್ಲಿ 90 ಮಿಲಿಯ 40

ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ ಟೆಟ್ರಾ ಪ್ಯಾಕೆಟ್ ಗಳು ಇರುವುದು ಕಂಡು ಬಂದಿರುತ್ತದೆ. ಸದರಿ ಮದ್ಯದ ಬಗ್ಗೆ ಸದರಿ ವ್ಯಕ್ತಿಯನ್ನು ಕೇಳಲಾಗಿ ಸದರಿ ವ್ಯಕ್ತಿಯು ಸದರಿ ಮದ್ಯದ ಬಗೆಗಿನ ಯಾವುದೇ ದಾಖಲೆಯನ್ನು ಒದಗಿಸಿರುವುದಿಲ್ಲ. ತದನಂತರ ಚಾಸಾ-1 ರವರು ನಮ್ಮ ಸಮಕ್ಷಮ ಸದರಿ ವ್ಯಕ್ತಿಯ ಹೆಸರು, ವಿಳಾಸ ಕೇಳಲಾಗಿ ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರೇ ಸದರಿ ವ್ಯಕ್ತಿಯಾಗಿ ತಮ್ಮ ಬಗೆಗಿನ ವಿಳಾಸ ಮತ್ತು ವಿವರಣೆಯನ್ನು ನೀಡಿರುತ್ತಾರೆ. ಸದರಿ ಆರೋಪಿತರಿಂದ ಅಮಾನತುಪಡಿಸಿಕೊಂಡ 90 ಮಿಲಿಯ 40 ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ ಟೆಟ್ರಾ ಪ್ಯಾಕೆಟ್ ಗಳನ್ನು ಸ್ಥಳದಲ್ಲಿಯೇ ಅಮಾನತು ಮಹಜರನ್ನು ಮ 12.30 ರಿಂದ 1.30 ರವರೆಗೂ ತಯಾರು ಮಾಡಿರುತ್ತಾರೆ. ನಾನು ಸದರಿ ಮಹಜರಿಗೆ ಸಹಿ ಮಾಡಿರುತ್ತೇನೆ. ಸಾಕ್ಷಿಯು ಈಗಾಗಲೇ ನಿಶಾನೆಗೊಂಡಿರುವ ನಿಪಿ-1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಸದರಿ ಅಮಾನತು ಪಂಚನಾಮೆಗೆ ಇಲಾಖಾ ಸೀಲ್ ನಂಃ 353 ಎಂದು ಮತ್ತು ಸದರಿ ಹಳದಿ ಬಣ್ಣದ ಚೀಲಕ್ಕೆ ಚಾಸಾ-1 ಹಾಗೂ ಚಾಸಾ-2 ಮತ್ತು 3 ರವರ ಸಹಿಗಳುಳ್ಳ ಚೀಟಿಯನ್ನು ಅಂಟಿಸಿರುತ್ತಾರೆ. ತದನಂತರ ಚಾಸಾ-1 ರವರು ಠಾಣೆಗೆ ಹಿಂದಿರುಗಿ ಪ್ರಕರಣದ ಬಗ್ಗೆ ವರದಿ ನೀಡಿರುತ್ತಾರೆ. ತದನಂತರ ಚಾಸಾ-7 ರವರು ನಿರ್ದೇಶಿಸಿದಂತೆ ದಿನಾಂಕಃ 4.5.2024 ರಂದು ವಶಪಡಿಸಿಕೊಂಡಿದ್ದ 90 ಮಿಲಿಯ 40 ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ ಟೆಟ್ರಾ ಪ್ಯಾಕೆಟ್ ಗಳನ್ನು ಎಫ್ ಎಸ್ ಎಲ್ ಗೆ ಪರೀಕ್ಷೆಗಾಗಿ ತಲುಪಿಸಿ ಬಂದಿರುತ್ತೇನೆ. ಸಾಕ್ಷಿಯು ಅಮಾನತು ಪಂಚನಾಮೆ ಕಾಲದಲ್ಲಿ ತೆಗೆದುಕೊಂಡ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ 90 ಮಿಲಿಯ 39 ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ ಖಾಲಿ ಟೆಟ್ರಾ ಪ್ಯಾಕೆಟ್ ಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಎಂಒ-1 ಎಂದು ಗುರುತಿಸಲಾಯಿತು. ಹಳದಿ ಬಣ್ಣದ ಕೈಚೀಲವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಎಂಒ-2 ಎಂದು ಗುರುತಿಸಲಾಯಿತು.

ನಾನು ದಿನಾಂಕಃ 11.5.2024 ರಂದು ಈ ಪ್ರಕರಣದಲ್ಲಿ ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಃಪಾಟೀ ಸವಾಲು ಆರೋಪಿ ಪರ ಶ್ರೀ.ಎನ್ ವಿ ಎಸ್ ವಕೀಲರಿಂದಃಃ**

ಬಿ ಹೆಚ್ ಕೈಮರ ಸರ್ಕಲ್ ಬಳಿ ಸುತ್ತ ಮುತ್ತ ಮನೆಗಳು ಮತ್ತು ಅಂಗಡಿ ಮುಂಗಟ್ಟುಗಳು ಇವೆ ಎಂದರೆ ಸರಿ. ನಾವು ನಮ್ಮ ಇಲಾಖಾ ವಾಹನವನ್ನು ನ ರಾ ಪುರ ದಿಂದ

ಕೊಪ್ಪ ಕಡೆಗೆ ಹೋಗುವ ರಸ್ತೆಯ ಎಡಬದಿಯಲ್ಲಿರುವ ಸೂರ್ಯೋದಯ ಬಾರ್ ಮುಂದೆ ನಿಲ್ಲಿಸಿದೆವು. ಸದರಿ ವಾಹನದಲ್ಲಿ ನಾನು, ಚಾಸಾ-1, ಚಾಲಕ ಕಿಜರ್ ಅಹಮ್ಮದ್ ಹಾಗೂ ರಾಜ್ ಕುಮಾರ್, ಹೋಂ ಗಾರ್ಡ್ ಇದ್ದೆವು. ನಿಪಿ-1 ಕ್ಕೆ ನನ್ನನ್ನು ಹೊರತುಪಡಿಸಿ ಬೇರೆ ಸಿಬ್ಬಂದಿಗಳ ಸಹಿಯನ್ನು ಪಡೆದುಕೊಂಡಿರುವುದಿಲ್ಲ. ನಾನು ದಾಳಿಯ ಸಂದರ್ಭದಲ್ಲಿ ಹಾಜರಿದ್ದೆ ಎಂಬುದಕ್ಕೆ ನನ್ನ ಹೆಸರನ್ನು ನಿಪಿ-1 ರಲ್ಲಿ ಎಲ್ಲಿಯೂ ಕಾಣಿಸಿರುವುದಿಲ್ಲ ಎಂದರೆ ಸರಿ. ಆ ಸಂದರ್ಭದಲ್ಲಿ ಆರೋಪಿತರು ನಮ್ಮ ಇಲಾಖಾ ವಾಹನದ ಬಲಬದಿಯಲ್ಲಿ ಇದ್ದರು. ಆ ಸಂದರ್ಭದಲ್ಲಿ ಚಾಸಾ-1 ರವರು ಅಲ್ಲಿ ನೆರೆದಿದ್ದ ಸಾರ್ವಜನಿಕರನ್ನು ಪಂಚ ಸಾಕ್ಷಿದಾರರಾಗಿ ಸಹಕರಿಸುವಂತೆ ಕೋರಿದರು ಆದರೆ ಯಾರು ಸಹಕರಿಸಲಿಲ್ಲ. ಸದರಿ ಸಾರ್ವಜನಿಕರ ಹೆಸರು ನಾನು ಈಗ ಹೇಳಲು ಆಗುವುದಿಲ್ಲ. ನಿಪಿ-1 ರಲ್ಲಿ ವಶಪಡಿಸಿಕೊಂಡ ಟೆಟ್ರಾ ಪ್ಯಾಕೆಟ್ ಗಳ ಬ್ಯಾಚ್ ನಂಬರ್, ಮುದ್ರಣ ದಿನಾಂಕವನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನ್ಯಾಯಾಲಯದ ಮುಂದೆ ವಶಪಡಿಸಿಕೊಂಡ ಎಲ್ಲಾ 40 ಟೆಟ್ರಾ ಪ್ಯಾಕೆಟ್ ಗಳು ಇರುವುದಿಲ್ಲ ಎಂದರೆ ಸರಿ. ನಿಪಿ-1 ರಲ್ಲಿ ಹಳದಿ ಬಣ್ಣದ ಕೈಚೀಲದಲ್ಲಿ 40 ಟೆಟ್ರಾ ಪ್ಯಾಕೆಟ್ ಗಳು ಇದ್ದವು ಎಂದು ಬರೆದಿರುತ್ತೇವೆ. ಎಂಒ-2 ರ ಮೇಲೆ ಅಂಟಿಸಿರುವ ಚೀಟಿಯ ಮೇಲೆ ನನ್ನ ಸಹಿ ಇರುವುದಿಲ್ಲ ಎಂದರೆ ಸರಿ. ನಮ್ಮ ಇಲಾಖಾ ವಾಹನದ ಚಾಲಕ ಈ ಪ್ರಕರಣದಲ್ಲಿ ಭಾವಚಿತ್ರವನ್ನು ಬಿ ಹೆಚ್ ಕೈಮರದ ಬಸ್ ನಿಲ್ದಾಣದ ಪಕ್ಕದಲ್ಲಿ ತೆಗೆದಿರುತ್ತಾರೆ. ನಿಪಿ-6 ನಮ್ಮ ಇಲಾಖಾ ಕಚೇರಿಯಲ್ಲಿ ತೆಗೆದ ಭಾವಚಿತ್ರವಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-6 ರಲ್ಲಿ ಬಸ್ ನಿಲ್ದಾಣ ಅಥವಾ ರಸ್ತೆ ಕಾಣುತ್ತಿಲ್ಲ ಎಂದರೆ ಸರಿ. ನಿಪಿ-6 ರಲ್ಲಿ ರಾಜ್ ಕುಮಾರ್ ಹೋಂ ಗಾರ್ಡ್ ಇದ್ದಾರೆ. ಎಂಒ-1 ನ್ನು ಆರೋಪಿತರು ಎಲ್ಲಿಂದ ಖರೀದಿ ಮಾಡಿರುತ್ತಾರೆ ಎಂಬುದರ ಬಗ್ಗೆ ನಾವು ವಿಚಾರಿಸಿದೆವು ಆದರೆ ಆರೋಪಿತರು ನಮಗೆ ಯಾವುದೇ ಉತ್ತರ ನೀಡಲಿಲ್ಲ. ನಾವು ಆರೋಪಿತರಿಂದ ಎಂಒ-1 ವಸ್ತುಗಳನ್ನು ವಶಪಡಿಸಿಕೊಂಡೆವು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಚಾಸಾ-7 ರವರ ನಿರ್ದೇಶನದಂತೆ ಎಂಒ-1 ಟೆಟ್ರಾ ಪ್ಯಾಕೆಟ್ ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಎಫ್ ಎಸ್ ಎಲ್ ಗೆ ತಲುಪಿಸಿ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ಎಂಒ-1 ಕ್ಕೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ನ್ನು ನಮ್ಮ ಕಚೇರಿಯಲ್ಲಿಯೇ ತಯಾರಿಸಿ ನನ್ನ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳ ಮಾತು ಕೇಳಿಕೊಂಡು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಃಃ ಮರು ವಿಚಾರಣೆ ಇಲ್ಲಃಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**Sd/-**

**ಪ್ರ.ದ.ನ್ಯಾದಂಃ ನ.ರಾ.ಪುರ.**

**ಸಾಕ್ಷಿ ಸಹಿಃ**